'ಹೌದ್ರಿ, ಲೇಡಿ ಬರ್ತಾಳೆ. ನೀವು ಡ್ಯೂಟಿ ರಿಪೋರ್ಟ್ ಮುಂದಿನವಾರ ತೆಗೆದುಕೊಂಡು ಕೆಲಸ ಹೇಳಿಕೊಡ್ರಿ. ಯಾಕೆಂದ್ರೆ ಹೊಸ ಕಂಪ್ಯೂಟರ್ ಆಪರೇಟರ್ ನಮ್ಮ ಕಂಪನಿ ವ್ಯವಹಾರದ ಪತ್ರ ಯಾವ ರೀತಿ ಟೈಪ್ ಮಾಡಬೇಕು, ಯಾವುದು ಕಾನ್ಫಿಡೆನ್ಶಿಯಲ್ ಎಂಬುದನ್ನು ಸರಿಯಾಗಿ ಹೇಳಿ ಕೊಡ್ರಿ. ಗೊತ್ತಾಯ್ತೊ ಇಲ್ಲೊ' ಎಂದು ಗತ್ತಿನಿಂದ ಹೇಳಿದ ಅನಿಲ್.

'ಆಗ್ಲಿ ಸಾರ್, ನೀವು ಹೇಳಿದ ಹಾಗೆ ಮಾಡ್ತೇನೆ. ಆದ್ರೆ ನಂದೂ ಒಂದು ರಿಕ್ವೆಸ್ಟ್ ಸಾರ್, ಆ ಯುವತಿ ನನ್ನ ಟೇಬಲ್ ಪಕ್ಕದ ಹತ್ತಿರವೇ ಕೂಡಿಸಿಕೊಂಡು ಕೆಲ್ಸ ಹೇಳಿಕೊಡ್ತೇನೆ. ಯಾಕೆಂದ್ರೆ ಫೈಲ್‌ಗಳು ಹತ್ತಿರವಿರುವುದರಿಂದ, ಕೆಲ್ಸ ಹೇಳಿಕೊಡಲು ಅನುಕೂಲವಾಗ್ತದೆ' ಎಂದು ಹೆಡ್ ಗುಮಾಸ್ತ ಅನಿಲ್ ಅನ್ನು ವಿನಂತಿಸಿದ.

'ಹಾಗೇ ಆಗ್ಲಿ, ನೀವು ಮುಂದಿನವಾರ ಒಂದು ಟೇಬಲ್, ಕಂಪ್ಯೂಟರ್ ಫಿಕ್ಸ್ ಮಾಡಿಸಿ ಕುರ್ಚಿ ಹಾಕಿಸಿ ರೆಡಿ ಮಾಡ್ರಿ. ಕೆಲಸ ಚಾಚೂ ತಪ್ಪದೇ ಹೇಳಿಕೊಡ್ರಿ' ಎಂದ ಅನಿಲ್.

ಹೊಸ ಚೈತನ್ಯ ಬಂದಂತಾಗಿ ಹೆಡ್ ಗುಮಾಸ್ತ ಛೇಂಬರ್‌ನಿಂದ ಹೊರಗಡೆ ಬಂದು ಟೇಬಲ್ ಯಾವ ಕಡೆಗೆ ಹಾಕಿಸಬೇಕು, ತಾನು ಎಲ್ಲಿ ಕೂಡಬೇಕೆಂದು ಚಿಂತನೆ ಮಾಡಲು ಪ್ರಾರಂಭಿಸಿದ.

ಹೊಸ ಯುವತಿ ಬರುವ ವಿಷಯ ತಿಳಿದ ಇನ್ನಿಬ್ಬರು ಕ್ಲಾರ್ಕ್‌ಗಳು ಹುರುಪಿನಿಂದ, ಲವಲವಿಕೆಯಿಂದ ಕೆಲಸ ಮಾಡಲು ಪ್ರಾರಂಭಿಸಿದ್ದರು. ರಾಮಪ್ಪ ಕಾಫಿ ತರಲು ಸಿಬ್ಬಂದಿ ಹೇಳಿದಾಗ ನಿರಾಕರಿಸಿ, ಅದು ತನ್ನ ಕೆಲಸವಲ್ಲ, ಏನಿದ್ರೂ ಕಂಪನಿಗೆ ಸಂಬಂಧಪಟ್ಟ ಕೆಲಸ ಹೇಳ್ರಿ ಎಂದು ಅವರ ಮುಖದ ಮೇಲೆ ರಾಚಿ ಹೊಡೆದ್ಹಾಂಗೆ ಹೇಳಿದ ಹಲವಾರು ಸಲ. ಹೊಸ ಲೇಡಿ ಬರ್ತಾಳೆ ಎಂದು ಸುದ್ದಿ ತಿಳಿದ ರಾಮಪ್ಪ, ತಾನೇ ಖುದ್ದಾಗಿ ಕಾಫಿ ತರಲು ಸಿದ್ದನಾಗಿದ್ದ.

ಆರ್ಡರ್ ಬಂದ ಮರುದಿವಸದಿಂದ ಕಂಪನಿ ಸಿಬ್ಬಂದಿಯಲ್ಲಿ ಲವಲವಿಕೆ ಹೊಸ ಉತ್ಸಾಹ, ಚೈತನ್ಯ ಎದ್ದು ಕಾಣುತ್ತಿತ್ತು. ಪೆಂಡಿಂಗ್ ಕೆಲಸಗಳೆಲ್ಲಾ ಶೀಘ್ರವಾಗಿ ಮುಗಿಸುತ್ತಿದ್ದರು. ಕ್ಲಾರ್ಕ್‌ಗಳು ಹೊಸ ಜೀನ್ಸ್ ಧರಿಸಿ ಟ್ರಿಮ್ ಆಗಿ ಕಾಣುತ್ತಿದ್ದರು. ಅನಿಲ್ ತನ್ನ ಐವತ್ತರ ವಯಸ್ಸನ್ನು ಮೂವತ್ತೈದಕ್ಕೆ ಇಳಿಸಿದ್ದ. ಹೇರ್ ಡೈ ಮಾಡಿಕೊಂಡು, ಕೂಲಿಂಗ್ ಗ್ಲಾಸ್ ಧರಿಸಿ ಗರಿಗರಿಯಾದ ಸಫಾರಿ ಸೂಟ್ ಧರಿಸಿ ನವ ವರನಂತೆ ತೋರುತ್ತಿದ್ದ. ಒಟ್ಟಾರೆ ಕಂಪನಿ ಒಂದು ರೀತಿಯಲ್ಲಿ ಹಬ್ಬದ ವಾತಾವರಣ, ಸಡಗರದಿಂದ ತುಂಬಿ ತುಳುಕಾಡಿತ್ತು. ಎಲ್ಲರೂ ಮುದಗೊಂಡಿದ್ದರು. ಯುವತಿ ಬರುವ ಕ್ಷಣಗಳನ್ನು ಕಾತುರದಿಂದ ಎದುರು ನೋಡುತ್ತಿದ್ದರು. ಅವಳು ಬರುವ ಸಂಗತಿ ಎಲ್ಲರಲ್ಲೂ ಅಲ್ಲೋಲಕಲ್ಲೋಲ ಮಾಡಿತ್ತು. ವಾರ ಕಳೆಯುವ ನಿರೀಕ್ಷೆಯಲ್ಲಿ ಕ್ಷಣಗಳು ಯುಗಗಳಂತೆ ಭಾಸವಾಗಿದ್ದವು. ಕಂಪನಿಯ ಸಿಬ್ಬಂದಿಗೆ ಅವರು ಹೇಗಿರಬಹುದು, ಮಾಡರ್ನ್ ಡ್ರೆಸ್ ಹಾಕಿರಬಹುದೆ ಇಲ್ಲವೆ ಸೀರೆ ಉಟ್ಟುಕೊಂಡು ಲಕ್ಷಣವಾಗಿ ನಿರಾಡಂಬರ ಸುಂದರಿಯಾಗಿರಬಹುದೇ, ಎಂಬ ಕುತೂಹಲ ಅನಿಲ್‌ನ ತಲೆಯಲ್ಲಿ ಕೊರೆಯಲಾರಂಭಿಸಿತು.

ಏನಾದ್ರೂ ಆಗ್ಲಿ, ಅವಳು ಬಂದ ಕೂಡಲೇ, ಡಿಕ್ಟೇಟ್ ಮಾಡಲು ಛೇಂಬರ್ ಒಳಗಡೆ ಕರೆಸಿ ಅವಳ ಮುದ್ದಾದ ಮುಖ ನೋಡ್ತಾ ಇದ್ದರೆ ವೇಳೆ ಕಳೆದಿದ್ದು ಗೊತ್ತಾಗುವುದೇ ಇಲ್ಲ ಎಂದು ತನ್ನಲ್ಲೇ ತಾನು ಸಮಾಧಾನ ಹೇಳಿಕೊಂಡು, ಕಿಸಕ್ಕನೆ ನಕ್ಕು ಕೆಲಸದಲ್ಲಿ ಮಗ್ನನಾದ ಅನಿಲ್.

ಅಂದು ಆ ಯುವತಿ ಹಾಜರಾಗುವ ದಿನ. ಎಲ್ಲರಲ್ಲೂ ಏನೋ ಕಾತುರ, ಕುತೂಹಲ. ಸಂತಸ. ರಾಮಪ್ಪ ಫ್ಲಾಸ್ಕ್‌ನಲ್ಲಿ ಬಿಸಿ ಬಿಸಿ ಕಾಫಿ ತಂದು ಅವಳು ಬಂದ ಕೂಡಲೇ ಕೊಡಬೇಕೆಂದು ರೆಡಿಯಾಗಿದ್ದ. ಇಬ್ಬರು ಕ್ಲಾರ್ಕ್‌ಗಳು ಜೀನ್ಸ್ ಧರಿಸಿ ತಮ್ಮ ಸ್ಥಳದಲ್ಲಿ ಕುಳಿತು ಅವಳ ಹಾದಿ ನೋಡುತ್ತಿದ್ದರು. ಅನಿಲ್ ಹೊಸ ನೀಲಿ ಸಫಾರಿ ಧರಿಸಿ, ಹೇರ್‌ಡೈ ಮಾಡಿಕೊಂಡು, ಸೆಂಟ್ ಹಚ್ಚಿಕೊಂಡು ಘಂ ಎಂದು ವಾಸನೆ ಸೂಸುತ್ತಾ, ತಮ್ಮ ಛೇಂಬರ್ ಶುಭ್ರಗೊಳಿಸಿ ಕಾದಿದ್ದ. ಎಲ್ಲರ ಗಮನ ಅವಳು ಆಗಮಿಸುವ ಮುಂಬಾಗಿಲ ಕಡೆಗೆ ಹರಿದಿತ್ತು.

ಸಮಯಕ್ಕೆ ಸರಿಯಾಗಿ ಸುಂದರ ಯುವತಿ ಫೈಲ್‌ನೊಂದಿಗೆ ಅನಿಲ್ ಛೇಂಬರ್ ಪ್ರವೇಶಿಸಿದಳು. ಒಳಗೆ ಬಂದ ಯುವತಿ ತನ್ನ ಪರಿಚಯ ಮಾಡಿಕೊಳ್ಳುತ್ತಾ, ಅಪಾಯಿಂಟ್ಮೆಂಟ್ ಆರ್ಡರ್ ಅನಿಲ್ ಕೈಗಿತ್ತಳು. ಕೂಲಂಕಶವಾಗಿ ಅವಲೋಕಿಸುತ್ತಾ ಅನಿಲ್ ಅವಳ ವಿದ್ಯಾಭ್ಯಾಸದ ಸರ್ಟಿಫಿಕೇಟ್‌ಗಳನ್ನು ನೋಡಿ ಅಚ್ಚರಿಪಟ್ಟು ಹುಬ್ಬೇರಿಸಿದ. ಸುಂದರ ಯುವತಿ, ಜೀನ್ಸ್ ಪ್ಯಾಂಟ್, ಶರ್ಟ್ ಧರಿಸಿ ಉಬ್ಬು ತಗ್ಗುಗಳ ದೇಹ ಪ್ರದರ್ಶಿಸುತ್ತಾ, ಹರವಿದ ಕೂದಲಿನೊಂದಿಗೆ ಎದುರಿಗೆ ಕುಳಿತ ಕ್ಷಣ ಅನಿಲ್‌ಗೆ ಮೈ ರೋಮಾಂಚನವಾಗಿತ್ತು. ಸ್ನಿಗ್ಧ ಮುಖ, ಗುಳಿ ಬೀಳುವ ಗಲ್ಲ, ಕೋಲು ಮುಖ, ಒಂದೆಳೆ ಚೈನು ಧರಿಸಿದ ಯುವತಿಯ ಬೊಗಸೆ ಕಂಗಳು ಅನಿಲ್‌ನನ್ನು ದೃಷ್ಟಿಸುತ್ತಿದ್ದವು. ಮುದಗೊಂಡ ಅನಿಲ್ ಯುವತಿಯ ಹೆಸರು ಕಣ್ಣಾಡಿಸಿ ಆರ್ಡರ್‌ನಲ್ಲಿ ನೋಡಿದ್ದರೂ, 'ನಿನ್ನ ಹೆಸರೇನು?' ಎಂದು ಕೌತುಕದಿಂದ ಪ್ರಶ್ನಿಸಿದ.

'ರಂಜನಿ' ಎಂದಳು ಎದುರಿಗಿದ್ದ ಯುವತಿ, ಮಾದಕ ನೋಟ ಬೀರುತ್ತಾ.

'ಸರಿ ಈ ದಿನದಿಂದಲೇ ಕೆಲಸಕ್ಕೆ ಸೇರಿ. ಬನ್ನಿ ಸಿಬ್ಬಂದಿಗೆ ಪರಿಚಯ ಮಾಡುವೆ' ಎಂದು ಛೇಂಬರ್ ನಿಂದ ಅವಳನ್ನು ಹೊರಗೆ ಕರೆದ.

ಸಿಬ್ಬಂದಿ ಹೊಸ ಯುವತಿ ಕಂಪನಿಗೆ ಸೇರಿದ್ದು ಕಂಡು ಉತ್ಸಾಹದಿಂದ ನಿಮಗೆ ಕೆಲಸ ನಾವು ಹೇಳಿಕೊಡುವೆವು ಎಂದು ಪೈಪೋಟಿಯಿಂದ ಮುಂದೆ ಬಂದಾಗ, ರಂಜನಿ ಮುಗುಳ್ನಗೆ ಬೀರಿದಳು. ಆ ನಗು ಎಲ್ಲರಿಗೂ ಆಹ್ಲಾದಕರವಾಗಿತ್ತು. ಅನಿಲ್ ಉತ್ಸುಕತೆಯಿಂದ ಸವಿಸ್ತಾರವಾಗಿ ಕೆಲಸದ ವಿವರ ತಿಳಿಸಿ, ಅವಳ ಚೆಲುವು ಸವಿಯುತ್ತಿದ್ದ.

ರಂಜನಿ ಮೇಡಂ, ತಿಂಗಳ ಸಂಬಳವಾದ ಮೇಲೆ ಪಾರ್ಟಿ ಕೊಡಿಸಬೇಕೆಂದು ಅನಿಲ್ ಸ್ವಲ್ಪ ಸಲಿಗೆಯಿಂದ ಕೇಳಿದಾಗ

'ಬೈ ಆಲ್ ಮೀನ್ಸ್, ಪಾರ್ಟಿ ಕೊಡಿಸುವೆ' ಎಂದು ಸವಿದನಿಯಲ್ಲಿ ಹೇಳಿ, ಅನಿಲ್ ಮುಖ ತದೇಕಚಿತ್ತದಿಂದ ದೃಷ್ಟಿಸಿದಳು. ಅವಳ ನಗೆಯಲ್ಲಿ ಮಾದಕತೆಯಿತ್ತು. ಸೊಗಸಿತ್ತು, ಗುಳಿ ಬೀಳುವ ಗಲ್ಲ ಲಾಸ್ಯವಾಡಿತ್ತು.

ಕೆಲಸ ಮಾಡುವ ಚಾಕಚಕ್ಯತೆಯಲ್ಲಿ ರಂಜನಿ ಎಲ್ಲರನ್ನೂ ಮೀರಿಸಿ, ಭೇಷ್ ಅನ್ನಿಸಿಕೊಂಡಳು. ಫೋನ್‌ನಲ್ಲಿ ಕನ್ನಡ, ಆಂಗ್ಲ ಭಾಷೆಯ ಅರಳು ಹುರಿಯುವ ಪಟಪಟ ಮಾತಿನ ಸೊಗಸು, ಗ್ರಾಹಕರ ಬೇಡಿಕೆಗಳಿಗೆ ಸ್ಪಂದಿಸುವ ಉತ್ತರ, ವ್ಯವಹಾರದ ಚಾಣಾಕ್ಷತೆ ಕಂಡು ಅನಿಲ್ ದಂಗಾಗಿದ್ದ. ಅವಳಿಗೆ, ತನ್ನ ವಯಸ್ಸಿನ ಪರಿವೇ ಇಲ್ಲದೆ ಮನಸೋತಿದ್ದ.

ಸಂಸಾರದಲ್ಲಿ ಎರಡು ಮಕ್ಕಳು, ಪತ್ನಿ ಸುನೀತ ಅನಿಲ್‌ನೊಂದಿಗಿದ್ದರೂ, ಆಫೀಸ್‌ನಲ್ಲಿ ರಂಜನಿಯ ಆಕರ್ಷಕ ಮೈಮಾಟ, ಚೆಲುವು, ಮಾತಿನ ವೈಖರಿಗೆ ಮನಸೋತಿದ್ದ. ಸುಪ್ತ ಪ್ರೇಮ ಅವಳಲ್ಲಿ ಅಂಕುರಿಸಿತು.

'ಸಾರ್, ವೀಕೆಂಡ್ ಐನಾಕ್ಸ್‌ನಲ್ಲಿ ಹೊಸ ಕನ್ನಡ ಪಿಕ್ಚರ್ ಬಂದಿದೆ. ನೀವೂ ಬರುವಿರಾ ಹೋಗೋಣ' ಎಂದಳು ರಂಜನಿ.

ಅನಿಲ್ ಕೊಂಚ ಗಲಿಬಿಲಿಗೊಂಡು ನಂತರ ಸುಧಾರಿಸಿಕೊಂಡು 'ಬರ್ತೀನಿ, ಹೋಗೋಣ. ಹಾಗೆ ಪಿಕ್ಚರ್ ನಂತರ ಗ್ರ್ಯಾಂಡ್ ಡಿನ್ನರ್ ಮುಗಿಸಿಕೊಂಡು ಬರೋಣ' ಎಂದು ಸಂತಸದಿಂದ ಅವಳ ಕೈಕುಲುಕಿದ. ಅವಳ ಕೈ ತಂಪಾಗಿ, ಮೃದುವಾಗಿ ಅನಿಲ್‌ಗೆ ಹಿತವಾಗಿತ್ತು. ಪಿಕ್ಚರ್ ನೋಡಿ ಡಿನ್ನರ್ ಮುಗಿಸಿ ಇಬ್ಬರೂ ವಾಪಾಸಾದಾಗ ರಾತ್ರಿ 10 ಗಂಟೆ ಆಗಿತ್ತು. ಮಧ್ಯ ವಯಸ್ಕನಾದ ಅನಿಲ್ ಅಂತರ್ಮುಖಿಯಾಗಿ ಯೋಚಿಸಿದ. ಸುಂದರ ಪತ್ನಿ, ಮಕ್ಕಳಿರುವಾಗ, ರಂಜನಿಯ ಸಲಿಗೆ ತಪ್ಪಲ್ಲವೇ? ಪಾಪಪ್ರಜ್ಞೆ ಕಾಡತೊಡಗಿ ಅನಿಲ್ ಚಡಪಡಿಸಿದ. ಮತ್ತೊಮ್ಮೆ ಒಳಮನಸ್ಸು ಸುಂದರ ಯುವತಿಯ ಸ್ನೇಹದ ಅವಕಾಶ ವಂಚಿತಗೊಳ್ಳಬಾರದು. ಸಹಜವಾಗಿ, ಸಾಮಾನ್ಯವಾಗಿ ಪುರುಷರೂ ಅವಕಾಶ ದೊರಕಿದರೆ, ಉಪಯೋಗಿಸದೆ ಇರಲಾರರು. ಅನಿಲ್‌ನೂ ಹೊರತಾಗಿರಲಿಲ್ಲ! ರಂಜನಿ ತನ್ನನ್ನು ಪ್ರೀತಿಸುತ್ತಿರಬಹುದೆ? ತಾನು ವಿವಾಹವಾಗಿದ್ದರೂ ತನ್ನನ್ನು ಪ್ರೀತಿಸಿ, ಸಲಿಗೆ ತೋರುತ್ತಿದ್ದಾಳೆ. ಅವಳ ಆಕರ್ಷಕ ಮುಖ, ದೇಹದ ಮೈಮಾಟ, ವ್ಯವಹಾರದ ಕುಶಲತೆ, ಪ್ರಾವೀಣ್ಯತೆಗೆ ಅನಿಲ್ ಮನಸೋತು, ಮುದಗೊಂಡಿದ್ದ.

ಅನಿಲ್ ಪತ್ನಿ ಸುನೀತಾ ಸಂಸಾರದ ನಿರ್ವಹಣೆಯೊಂದಿಗೆ ನೌಕರಿಯನ್ನೂ ಸಂಪಾದಿಸಿದ್ದಳು. ಕೈ ತುಂಬಾ ಸಂಬಳ, ನಿರ್ದಿಷ್ಟ ಸಮಯದ ಕೆಲಸ, ಸಿಬ್ಬಂದಿಯ ಸಹಕಾರದಲ್ಲಿ ನೆಮ್ಮದಿ ಕಂಡುಕೊಂಡಿದ್ದಳು. ಸಹೋದ್ಯೋಗಿ ರಮೇಶ್ ಸುನೀತಳಿಗೆ ಎಲ್ಲ ಕೆಲಸದ ಮಹತ್ವ ತಿಳಿಸಿ ಮನ ಹಗುರ ಮಾಡುತ್ತಿದ್ದ. ರಮೇಶನ ಟ್ರಿಮ್ ಮಾಡಿದ ಮೀಸೆ, ದಾಡಿ, ನಕ್ಕರೆ ಸ್ಫುರದ್ರೂಪಿಯಾಗಿ ಕಾಣುವ ವ್ಯಕ್ತಿತ್ವ, ನಿರರ್ಗಳವಾಗಿ ಆಂಗ್ಲ ಮಿಶ್ರಿತ ಕನ್ನಡ ಭಾಷೆಯ ಮಾತು ಸುನೀತಳಿಗೆ ಹಿತವಾಗಿ ಕಂಡವು. ಸ್ನೇಹ, ಸಲಿಗೆ ಇವರನ್ನು ಹತ್ತಿರಕ್ಕೆ ಸೆಳೆದವು. ಸ್ನೇಹ ಪ್ರೀತಿಯಾಗಿ ಮಾರ್ಪಟ್ಟು, ಸುನೀತ ರಮೇಶನನ್ನು ಪ್ರೀತಿಸಲು ಪ್ರಾರಂಭಿಸಿದಳು. ಅವನೂ ಅವಳ ಮನಸ್ಥಿತಿ ಅರಿತು, ಸಂಸಾರಸ್ಥನಾದರೂ